**ಸಾಕ್ಷಿಗೆ ದಿನಾಂಕ:24-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. KLR ವಕೀಲರಿಂದ ::**

ನಿಪಿ1 ನ್ನು ರೇವಣ್ಣ ಎನ್ನುವ ಬಿಕ್ಕಲಂದಾರರು ತಯಾರಿಸಿರುತ್ತಾರೆ. ನಿಪಿ1 ನ್ನು ರೇವಣ್ಣ ರವರ ಸಹಾಯಕರು ಬೆರಳಚ್ಚು ಮಾಡಿರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ1 ತಯಾರಿಸಲು ಮಾಹಿತಿಯನ್ನು ನಾನು ಹಾಗೂ ಚಂದ್ರಪ್ಪ ರವರು ಮಾಹಿತಿ ನೀಡಿರುತ್ತೇವೆ. ನಿಪಿ1 ನ್ನು ತಯಾರಿಗೆ ಇಲ್ಲಿಗೆ 15 ವರ್ಷ ಆಗಿರಬಹುದು. ನಾನು ಹೇಳುತ್ತಿರುವ ಚಂದ್ರಪ್ಪ ಈಗ ಮೃತರಾಗಿರುತ್ತಾರೆ. ಸದರಿ ಚಂದ್ರಪ್ಪ ಮೃತರಾಗಿ ಸುಮಾರು 8 ವರ್ಷ ಆಗಿರಬಹುದು, ನಿಖರವಾದ ದಿನಾಂಕ ಗೊತ್ತಿಲ್ಲ. ನಿಪಿ1 ಕ್ರಯ ಕರಾರು ಪತ್ರದಲ್ಲಿ ಇರುವ ಸಹಿಗಳ ಪಕ್ಕದಲ್ಲಿ X ಎನ್ನುವ ಚಿಹ್ನೆ ಯಾರು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಬಿಕ್ಕಲಂದಾರರು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಚಿಹ್ನೆಗಳನ್ನು ಸಹಿ ಮಾಡಿಸಿಕೊಳ್ಳುವ ಕಾರಣಕ್ಕೆ ಹಾಕಲಾಗಿರುತ್ತದೆ. ಸದರಿ X ಚಿಹ್ನೆ ಹಾಕುವ ಸಮಯದಲ್ಲಿ ಚಂದ್ರಪ್ಪ, ಮೋಹನ್ ಕುಮಾರ್, ಬೇಬಿ ಮತ್ತೊಬ್ಬರು ಇದ್ದರು, ಅವರ ಹೆಸರು ಈಗ ನನಗೆ ನೆನಪಿಲ್ಲ. ನಿಪಿ1 ಕ್ರಯ ಕರಾರು ಪತ್ರ ಮಾಡುವ ದಿನ ಯಾವ ಕಾರಣಕ್ಕೆ ನೋಂದಣಿ ಕ್ರಯಪತ್ರ ಮಾಡಿಸಿಕೊಂಡಿರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕೆಲವು ಸರ್ಕಾರಿ ಅಡಚಣೆಗಳು ಇದ್ದ ಕಾರಣ ಮಾಡಿಸಿಕೊಳ್ಳಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈಗ ಹೇಳುತ್ತಿರುವ ವಿಚಾರ ನಿಪಿ1 ಕ್ರಯ ಕರಾರು ಪತ್ರದಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ನಿಪಿ1 ಕ್ರಯ ಕರಾರು ಪತ್ರದಲ್ಲಿ ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ದಾವೆಗೋಸ್ಕರ ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ1 ಕ್ರಯ ಕರಾರು ಪತ್ರ ಆಗುವ ದಿನವೇ ನೋಂದಾಯಿತ ಕ್ರಯಪತ್ರ ಮಾಡಿಕೊಳ್ಳಲು ಯಾವುದೇ ತೊಂದರೆ ಇಲ್ಲದಿದ್ದರೂ ಇದೇ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಂದ್ರಪ್ಪ ರವರ ಜೀವಿತಾ ಅವಧಿಯಲ್ಲಿ ನಿಪಿ1 ಕ್ರಯ ಕರಾರು ಪತ್ರದ ಬಗ್ಗೆ ನಾನು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಅವರನ್ನು ಹಲವಾರು ಬಾರಿ ಕೇಳಿರುತ್ತೇನೆ

ಎಂದು ನುಡಿದಿರುತ್ತಾರೆ. ಚಂದ್ರಪ್ಪ ರವರ ಜೀವಿತಾ ಅವಧಿಯಲ್ಲಿ ಲಿಖಿತವಾಗಿ ಅವರನ್ನು ನೊಂದಾಯಿತ ಕ್ರಯಪತ್ರ ಮಾಡಿಕೊಡುವಂತೆ ಕೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಚಂದ್ರಪ್ಪ ರವರು ನಿಪಿ1 ಕ್ರಯ ಕರಾರು ಪತ್ರದ ಅಡಿಯಲ್ಲಿ ನೀಡಿದ ಹಣವನ್ನು ನನಗೆ ಸಂಪೂರ್ಣವಾಗಿ ಹಿಂದಿರುಗಿಸಿದ ಕಾರಣ ನಾನು ಅವರ ಅವರ ಜೀವಿತಾ ಅವಧಿಯಲ್ಲಿ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತು ಮತ್ತು ನನ್ನ ಸ್ವತ್ತು ಅಕ್ಕಪಕ್ಕ ಇರುತ್ತದೆ ಎಂದರೆ ಸರಿ. ನಾನು ಪದವಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಸುಮಾರು 20 ಎಕರೆ ಆಸ್ತಿ ಇರುತ್ತದೆ. ಅಷ್ಟು ಆಸ್ತಿ ಅಡಿಕೆ ತೋಟ ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿಗಳಿಗೆ ದಾವಾ ಶೆಡ್ಯೂಲ್ ಸ್ವತ್ತು ಹೊರತುಪಡಿಸಿ ಬೇರೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಕುಟುಂಬದವರು 7-8 ವರ್ಷಗಳಿಂದ ಬೇರೆ ಬೇರೆ ವಾಸ ಮಾಡುತ್ತಿರಬಹುದು. ಚಂದ್ರಪ್ಪ ರವರು ತೀರಿಕೊಂಡ ನಂತರದಲ್ಲಿ ಅವರ ಸಹೋದರರು ಮತ್ತು ಮಕ್ಕಳು ಸೇರಿ ಅವರ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ನೋಂದಣಿ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಒಂದು ನೋಂದಣಿ ವಿಭಾಗ ಪತ್ರದ ಬಗ್ಗೆ ನಮೂದು ಮಾಡಿದ್ದು ಸದರಿ ವಿಚಾರ ನನಗೆ ಪ್ರತಿವಾದಿಗಳು ವಿಭಾಗ ಮಾಡಿಕೊಂಡ ನಂತರದಲ್ಲಿ ಇತ್ತೀಚೆಗೆ 8 ವರ್ಷದ ಹಿಂದೆ ತಿಳಿದು ಬಂದಿರುತ್ತದೆ, ನಿಖರವಾದ ದಿನಾಂಕ ನೆನಪಿಲ್ಲ.

ನಾನು ಹೇಳುವಂತೆ ನಿಪಿ1 ಕ್ರಯ ಕರಾರು ಪತ್ರದ ಅಡಿಯಲ್ಲಿ ಯಾವುದಾದರು ವ್ಯವಹಾರ ಪ್ರತಿವಾದಿಗಳ ಕುಟುಂಬದ ಜೊತೆ ನನಗೆ ಆಗಿದ್ದಲ್ಲಿ ನಾನು ವಿಭಾಗ ಪತ್ರ ಆದ ಸಮಯದಲ್ಲಿಯೇ ತಕರಾರು ಮಾಡುತ್ತಿದ್ದೆ ಎಂದರೆ ಸಾಕ್ಷಿಯು ನನಗೆ ವಿಭಾಗ ಪತ್ರವಾದ ವಿಚಾರ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಅನುಪಸ್ದಿತಿಯಲ್ಲಿ ನಿಪಿ1 ಕ್ರಯ ಕರಾರು ಪತ್ರವನ್ನು ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆದಕಾರಣ ಸದರಿ ದಾಖಲೆಯಲ್ಲಿ ಸಹಿ ಇರುವ ಕಡೆಗಳಲ್ಲಿ X ಚಿಹ್ನೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ1 ಕ್ರಯ ಕರಾರು ಪತ್ರಕ್ಕೆ ಇರುವ ಸಾಕ್ಷಿದಾರರಾದ ಚಂದ್ರಪ್ಪ ಹಾಗೂ ಸುಭಾಷ್ ರವರು ತಿಮ್ಮಾಪುರ ಗ್ರಾಮದವರಾಗಿರುತ್ತಾರೆ. ನಿಪಿ1 ಕ್ರಯ ಕರಾರು ಪತ್ರದಲ್ಲಿ ಸಾಕ್ಷಿದಾರರ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಕ್ರಯ ಕರಾರು ಪತ್ರದಲ್ಲ್ ಸಾಕ್ಷಿದಾರರ ಸಂಪೂರ್ಣ

ವಿಳಾಸ ಇರುವುದಿಲ್ಲ ಎಂದರೆ ಸರಿ. ನನಗೆ ಬೇಕಿದ್ದವರನ್ನು ಸಾಕ್ಷಿದಾರರನ್ನಾಗಿ ಅವರ ಸಂಪೂರ್ಣ ವಿಳಾಸವನ್ನು ನಮೂದು ಮಾಡದೇ ನಿಪಿ1 ಕ್ರಯ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ1 ಕ್ರಯ ಕರಾರು ಪತ್ರದಲ್ಲಿ ಇರುವ ವ್ಯಕ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಕ್ರಯ ಕರಾರು ಪತ್ರದ ಕೆಳಗೆ ನಾನು ಆಸ್ತಿ ನಿಜವಾಗಲು ಖರೀದಿ ಮಾಡುವ ಉದ್ದೇಶ ಇದ್ದಿದ್ದರೇ ಸಾಕ್ಷಿದಾರರ, ಬಿಕ್ಕಲಂದಾರರ ಹಾಗೂ ಬೆರಳಚ್ಚು ಮಾಡಿದರವರ ಮಾಹಿತಿಯನ್ನು ನಾನು ಸಂಪೂರ್ಣವಾಗಿ ನಮೂದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಿಪಿ1 ಕ್ರಯ ಕರಾರು ಪತ್ರ ಕೇವಲ ಸಾಲದ ಭದ್ರತೆಗಾಗಿ ಮಾಡಿಕೊಂಡ ಕಾರಣ ಅದರಲ್ಲಿ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನಾನು ಬೇಕಾದಷ್ಟು ಮುಖ ಬೆಲೆಯ ಚಾಪಾ ಕಾಗದದ ಮೇಲೆ ಅದನ್ನು ತಯಾರಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳಿಂದ ಹಣ ಮರು ಪಾವತಿ ಆಗಿದ್ದ ಕಾರಣ ನಾನು ನಿಪಿ1 ಕ್ರಯ ಕರಾರು ಪತ್ರ ಆಗಿರುತ್ತದೇ ಎಂದು ಹೇಳುತ್ತಿರುವ ದಿನಾಂಕದಿಂದ 17 ವರ್ಷಗಳ ಕಾಲ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೂ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ 1ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತನ್ನು ನಾನು ಅಭಿವೃದ್ದಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಭಿವೃದ್ದಿಪಡಿಸಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಬಾಜುದಾರರಿಗೆ ಹಾಗೂ ನನಗೆ ಯಾವುದೇ ದ್ವೇಷ ಇರುವುದಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತು ಪ್ರಸ್ತುತದಲ್ಲಿ 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿನ ವಿಸ್ತೀರ್ಣ 1 ಚಿಲ್ಲರೆ ಎಕರೆ ಇದ್ದು ಅದರ ಪೈಕಿ ನನಗೆ 14 ಗುಂಟೆ ಮಾರಾಟ ಮಾಡಲು ನನಗೆ ನಿಪಿ1 ಕ್ರಯ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನ ವಿಸ್ತೀರ್ಣವು ಸಹ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಪ್ರಸ್ತುತ ಮಾಲೀಕತ್ವದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಚಂದ್ರಪ್ಪ ರವರು 30.11.2018 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ನೋಂದಾಯಿತ ವಿಭಾಗ ಪತ್ರವನ್ನು 2021 ರಲ್ಲಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನಗೂ ಹಾಗೂ ಚಂದ್ರಪ್ಪ

ರವರಿಗೆ ತುಂಬಾ ವಿಶ್ವಾಸ ಹಾಗೂ ನಂಬಿಕೆ ಇದ್ದ ಕಾರಣ ಅವರ ಜೀವಿತಾ ಅವಧಿಯಲ್ಲಿ ಅವರು ನನಗೆ ಹಣವನ್ನು ವಾಪಸ್ಸು ನೀಡಿದ್ದರು ನನ್ನಿಂದ ನಿಪಿ1 ಪತ್ರವನ್ನು ವಾಪಸ್ಸು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಕ್ರಯ ಕರಾರು ಪತ್ರದ ಕೆಳಗೆ ಯಾವುದೇ ಪರಿಹಾರ ಪಡೆಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ದ ಸುಳ್ಳು ಕತೆ ಕಟ್ಟಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: